ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
ಸಿಸಿ ನಂಬರ. 637/2022

ಪಿ ಡಬ್ಲ್ಯೂ- 1

ದಿಃ 22-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ವಿ.ಎಸ್ ರವರಿಂದಃ

ಕಂದಾಯ ಇಲಾಖೆಯಲ್ಲಿ ಎಷ್ಟು ವರ್ಷಗಳಿಂದ ಸೇವೆಯನ್ನು ಸಲ್ಲಿಸುತ್ತಿದ್ದೀರಿ ಎಂದರೆ ಸಾಕ್ಷಿಯು 19 ವರ್ಷಗಳಿಂದ ಸಲ್ಲಿಸುತ್ತಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ಸೇವಾ ಅವಧಿಯಲ್ಲಿ ಅಕ್ಕಿಗೆ ಸಂಬಂಧಪಟ್ಟಂತೆ ಈ ಪ್ರಕರಣವನ್ನು ಬಿಟ್ಟರೆ ಬೇರೆ ಪ್ರಕರಣ ದಾಖಲಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಸೇವಾ ಅವಧಿಯಲ್ಲಿ ಅಕ್ಕಿಗೆ ಸಂಬಂಧಪಟ್ಟ ಪ್ರಕರಣದಲ್ಲಿ ಸಾಕ್ಷಿಯಾಗಿ ನುಡಿದಿರುತ್ತಿರಾ ಎಂದರೆ ಸಾಕ್ಷಿಯು ಅಕ್ಕಿಗೆ ಸಂಬಂಧಪಟ್ಟ ಪ್ರರಕಣದಲ್ಲಿ ನುಡಿದಿರುವುದಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣ ಆಗುವ ಸಮಯದಲ್ಲಿ ಆಹಾರ ನಿರೀಕ್ಷಕರು ಯಾರು ಆಗಿದ್ದರು ಎಂದರೆ ಸಾಕ್ಷಿಯು ಸಂತೋಷ ಎಳಗದ್ದೆ ಇದ್ದರು ಎಂದು ನುಡಿಯುತ್ತಾರೆ. ನಿಮ್ಮ ಸೇವಾ ಅವಧಿಯಲ್ಲಿ ಎಂದಿಗಾದರೂ ರೇಷನ್ ಅಕ್ಕಿಯನ್ನು ಕದ್ದುಕೊಂಡು ಹೋಗಿರುತ್ತಾರೆ ಅಥವಾ ರೆಷನ್

ಅಕ್ಕಿಯ ದೂರುಪಯೋಗವಾಗಿರುತ್ತದೆ ಎಂದು ದೂರು ಬಂದಿರುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

2. ನಿಮ್ಮದು ಮುಮೆಂಟ್ ರಜಿಸ್ಟರ್ ಇರುತ್ತದೆಯಾ ಎಂದರೆ ಇರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಕಚೇರಿಯ ಅವಧಿಯು ಎಷ್ಟರಿಂದ ಎಷ್ಟು ಎಂದರೆ ಸಾಕ್ಷಿಯು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.30 ಹಾಗೂ ಮಧ್ಯಾಹ್ನ 2.15 ರಿಂದ ಸಂಜೆ 5.30 ಗಂಟೆಯವರೆಗೆ ಇರುತ್ತದೆ ಎಂದು ನುಡಿಯುತ್ತಾರೆ. ದಿಃ28-05-2021 ರಂದು ಮಾಹಿತಿ ಬಂತು ಎಂದು ಹೇಳಿದಾಗ ಈ ವಿಚಾರವನ್ನು ಮೇಲಾಧಿಕಾರಿಗಳಿಗೆ ತಿಳಿಸಿರುತ್ತೀರಾ ಎಂದರೆ ತಿಳಿಸಿರುತ್ತೇವೆ ಎಂದು ನುಡಿಯುತ್ತಾರೆ. ಹಾಗೆ ಈ ಮಾಹಿತಿ ಬಂದ ಸಂಗತಿಯನ್ನು ನಿಮ್ಮ ಇಲಾಖೆಗೆ ಸಂಬಂಧಪಟ್ಟ ದಾಖಲಾತಿಯಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಯಾವ ಕಡೆಯಿಂದ ಮಂಜಗುಣಿಗೆ ಹೋಗಿರುತ್ತೀರಿ ಎಂದರೆ ಸಾಕ್ಷಿಯು ಅಂಕೋಲಾ ಕಡೆಯಿಂದ ಹೊನ್ನೆಬೈಲ್ ರಸ್ತೆಯ ಮಾರ್ಗವಾಗಿ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಮತ್ತೊಂದು ರಸ್ತೆ ಯಾವುದಾಗಿರುತ್ತದೆ ಎಂದರೆ ಸಾಕ್ಷಿಯು ಅದು ಮೇಲಿನ ಮಂಜಗುಣಿಗೆ ಹೋಗುವುದಾಗಿದ್ದು, ನಾವು ಹೋಗಿದ್ದು, ಕೆಳಗಿನ ಮಂಜಗುಣಿಗೆ ಎಂದು ನುಡಿಯುತ್ತಾರೆ.

2. ನೀವು ಹೇಳುವ ವಾಹನದ ಮುಂದುಗಡೆ ಹೋಗಿರುತ್ತೀರಾ ಅಥವಾ ಹಿಂದುಗಡೆ ಹೋಗಿರುತ್ತೀರಾ ಎಂದರೆ ಸಾಕ್ಷಿಯು ವಾಹನವು ನಮ್ಮ ಕಡೆ ಮುಖ ಮಾಡಿ ಇದ್ದು, ಅದರ

ಮುಂದುಗಡೆ ನಾವು ಇರುತ್ತವೆ ಎಂದು ನುಡಿಯುತ್ತಾರೆ. ನೀವು ಹೇಗೆ ಹೋಗಿರುತ್ತೀರಿ ಎಂದರೆ ಬೈಕಿನಲ್ಲಿ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಚಾಲಕನು ಯಾವ ದಿಕ್ಕಿನಲ್ಲಿ ಓಡಿ ಹೋಗಿರುತ್ತಾನೆ ಎಂದರೆ ಉತ್ತರ ದಿಕ್ಕಿನಲ್ಲಿ ಓಡಿ ಹೋಗಿರುತ್ತಾನೆ ಎಂದು ನುಡಿಯುತ್ತಾರೆ. ನೀವು ಚಾಲಕನನ್ನು ಹಿಡಿಯಲು ಪ್ರಯತ್ನ ಪಟ್ಟಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ, ನಾವು ಬೈಕಿನಿಂದ ಇಳಿದು ಹೋಗುವಷ್ಟರಲ್ಲಿ ಆತನು ಓಡಿ ಹೋಗಿರುತ್ತಾನೆ ಎಂದು ನುಡಿಯುತ್ತಾರೆ. ಕೆಳಗಿನ ಮಂಜಗುಣಿಯಲ್ಲಿ ಸಾಕಷ್ಟು ಮನೆಗಳು ಒಂದಕ್ಕೊಂದು ಹೊಂದಿಕೊಂಡು ಇರುತ್ತವೆ ಎಂದರೆ ಸರಿ, ಹಾಗೂ ಸಾಕಷ್ಟು ಜನವಸತಿ ಇರುವ ಪ್ರದೇಶವೆಂದರೆ ಸರಿ. ಅಲ್ಲಿ ಏನಾದರೂ ಓಡಿ ಹೊಗಿದ್ದವರ ಬಗ್ಗೆ ವಿಚಾರಣೆ ಮಾಡಿರುತ್ತೀರಾ ಎಂದರೆ ಕೇಳಿರುತ್ತೇವೆ ಎಂದು ನುಡಿಯುತ್ತಾರೆ. ಯಾರಿಗೆ ವಿಚಾರಣೆ ಮಾಡಿರುತ್ತೀರಿ ಹಾಗೂ ಅವರು ಏನು ಉತ್ತರವನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅವರು ನಮಗೆ ಗೊತ್ತಿರುವುದಿಲ್ಲ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಪಡಿತರ ಅಕ್ಕಿಯು ಎಲ್ಲ ಅಕ್ಕಿಯ ತರ ಇರುತ್ತದೆಯಾ ಅಥವಾ ಏನಾದರೂ ವಿಶೇಷ ಗುರುತು ಇರುತ್ತದೆಯಾ ಎಂದರೆ ಸಾಕ್ಷಿಯು ಎಲ್ಲ ಅಕ್ಕಿಯ ತರ ಇರುತ್ತದೆ ಎಂದು ನುಡಿಯುತ್ತಾರೆ.

3. ಚಾಸಾ–4 ಆಹಾರ ನಿರೀಕ್ಷಕರು ಎಂದು ಯಾವಾಗಿನಿಂದ ಇದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅವರು ಆ ಸಮಯದಲ್ಲಿ ಪ್ರಭಾರ(incharge) ಆಹಾರ ನಿರೀಕ್ಷಕರು ಆಗಿದ್ದರು. ಚಾಸಾ–4 ರವರು ಪ್ರಭಾರ

ಆಹಾರ ನಿರೀಕ್ಷಕರು ಆಗಿದ್ದರು ಎಂದು ಫಿರ್ಯಾದಿಯನ್ನು ಕೊಡುವ ಪೂರ್ವದಲ್ಲಿ ದಾಖಲೆಯನ್ನು ಏನಾದರೂ ನೋಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವ ದಿನಾಂಕದಂದು ಜಪ್ತಿ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ದಿಃ28-05-2021 ರಂದು ಜಪ್ತಿ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಬೆಳಿಗ್ಗೆ 7.15 ಗಂಟೆಯ ಸುಮಾರಿಗೆ ಮಾಡಿಕೊಂಡಿರುತ್ತೇವೆ. ಜಪ್ತಿಪಡಿಸಿಕೊಂಡಿದ್ದನ್ನು ಎಸಿ ಅಥವಾ ಡಿಸಿ ಅವರಿಗೆ ವರದಿ ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ತಹಶೀಲ್ದಾರ ಇವರಿಗೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ತಹಶೀಲ್ದಾರ ಇವರಿಗೆ ಲಿಖಿತವಾಗಿ ಏನಾದರೂ ವರದಿ ಮಾಡಿಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯಲ್ಲಿ ನಾವು ಜಪ್ತಿ ಮಾಡಿದ್ದೇವೆ ಎನ್ನುವ ಅಕ್ಕಿಯನ್ನು ಎಷ್ಟು ಎಂದು ನಿಖರವಾಗಿ ನಮೂದು ಮಾಡಿಲ್ಲ ಎಂದರೆ ಸರಿ. ಈ ಪಂಚನಾಮೆಯಲ್ಲಿ ಕೆಳಗಡೆ ಬರೆದಿರುವ ಹೆಸರುಗಳ ವ್ಯಕ್ತಿಗಳ ವಿವರವನ್ನು ನಮೂದು ಮಾಡಿಲ್ಲ ಎಂದರೆ ಸರಿ. ಇಂತಹ ವ್ಯಕ್ತಿಗಳು ಇದ್ದಾರೋ ಅಥವಾ ಇಲ್ಲವೋ ಎಂದು ದಾಖಲಾತಿಗಳನ್ನು ಪರಿಶೀಲನೆ ಮಾಡಿ ಖಚಿತಪಡಿಸಿಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಹೇಳುವ ಜಪ್ತಿ ಮಾಡಿಕೊಂಡ ವಾಹನ ಮತ್ತು ಅಕ್ಕಿಯನ್ನು ಯಾವ ಗೋದಾಮೀನಲ್ಲಿ ಇಟ್ಟಿರುತ್ತೀರಿ ಎಂದರೆ ಸಾಕ್ಷಿಯು ಎ ಪಿ ಎಂ ಸಿ ಗೆ ಸಂಬಂಧಪಟ್ಟ ಗೋದಾಮಿನಲ್ಲಿ ಇಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಎ ಪಿ ಎಂ ಸಿ ಗೋದಾಮಿನಲ್ಲಿ ಸ್ವತ್ತನ್ನು ಇಡಲು ಯಾವ ಪ್ರಕ್ರಿಯೆ

ಇರುತ್ತದೆ ಎಂದು ಗೊತ್ತಿದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅಕ್ಕಿಯನ್ನು ಯಾರ ಸಹಾಯದ ಮೂಲಕ ಗೋದಾಮಿನಲ್ಲಿ ಇಟ್ಟಿರುತ್ತೀರಿ ಎಂದರೆ ಸಾಕ್ಷಿಯು ಮಂಜಗುಣಿಯಲ್ಲಿನ ಪರಿಚಯದ ಚಾಲಕನನ್ನು ಕರೆದುಕೊಂಡು ಅದೇ ವಾಹನದಲ್ಲಿ ತೆಗೆದುಕೊಂಡು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಚಾಲಕನನ್ನು ಆಹಾರದ ನಿರೀಕ್ಷಕರು ಕರೆದಿದ್ದರು. ಚಾಲಕನಿಗೆ ಏನಾದರೂ ಪೇಮೆಂಟ್ ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಗೋದಾಮಿನ ಒಳಗಡೆ ಸೀದಾ ತೆಗೆದುಕೊಂಡು ಹೋಗಿರುತ್ತೀರಾ ಎಂದರೆ ಸಾಕ್ಷಿಯು ಅಕ್ಕಿಯ ಚೀಲಗಳನ್ನು ಎತ್ತಿಕೊಂಡು ಗೋದಾಮಿನ ಒಳಗಡೆ ಇಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ವಾಹನವನ್ನು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿರುತ್ತೇವೆ. ಗೋದಾಮಿನಲ್ಲಿ ಇಟ್ಟ ಅಕ್ಕಿಯನ್ನು ಯಾರ ಸುಪರ್ದಿಯಲ್ಲಿ ಇಟ್ಟಿರುತ್ತೀರಿ ಎಂದು ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು ಗೋದಾಮಿನ ಇನ್‌ಚಾರ್ಜ ಒಬ್ಬರು ಇದ್ದು, ಅವರು ನೋಡಿಕೊಳ್ಳುತ್ತಿದ್ದರು. ಇಷ್ಟು ಅಕ್ಕಿ ಚೀಲಗಳು ಗೋದಾಮೀನಲ್ಲಿ ಇರುತ್ತವೆ ಅಥವಾ ಇಷ್ಟು ಅಕ್ಕಿ ಚೀಲಗಳನ್ನು ಅವರ ಗೋದಾಮಿನಲ್ಲಿ ಇಟ್ಟುಕೊಳ್ಳುತ್ತಿದ್ದಾರೆ ಎಂದು ಲಿಖಿತವಾಗಿ ಏನಾದರೂ ನೀವು ಕೊಟ್ಟಿದ್ದಾಗಲಿ ಅಥವಾ ಅವರು ಕೊಟ್ಟಿದ್ದಾಗಲಿ ಇರುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

4. ಅಕ್ಕಿಯನ್ನು  ಗೋದಾಮಿನಲ್ಲಿ ಹಾಕಲು ಯಾರನ್ನು ಕರೆದುಕೊಂಡು ಹೋಗಿರುತ್ತೀರಿ ಎಂದರೆ ಸಾಕ್ಷಿಯು 3 ಜನ ಗ್ರಾಮ ಸಹಾಯಕರನ್ನು ಕರೆದುಕೊಂಡು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಅಕ್ಕಿಯನ್ನು ಗೋದಾಮಿನಿಂದ ಯಾವಾಗ ಗಾಡಿಯಲ್ಲಿ ತುಂಬಿರುತ್ತೀರಿ ಎಂದರೆ ಸಾಕ್ಷಿಯು ದಿಃ29-05-2021 ರಂದು ಅಕ್ಕಿಯನ್ನು ವಾಹನಕ್ಕೆ ಹಾಕಿಕೊಂಡು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿರುತ್ತೇವೆ ಎಂದು ನುಡಿಯುತ್ತಾರೆ.

ನ್ಯಾಯಾಲಯದ ಬೆಳಗಿನ ಅವಧಿ ಮುಗಿದಿದ್ದರಿಂದ ಪಾಟೀ ಸವಾಲುನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.

ಮಧ್ಯಾಹ್ನ 3.30 ಗಂಟೆಗೆ ಸಾಕ್ಷಿಯನ್ನು  ಪುನಃ ಕರೆಯಿಸಿ ಪ್ರಮಾಣ ವಚಣ ಬೊಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ  2 ನೇ ಆರೋಪಿ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

5. ಅಕ್ಕಿಯನ್ನು ತುಂಬಲು ಯಾರು ಬಂದಿದ್ದರು ಎಂದರೆ ಗ್ರಾಮ ಸಹಾಯುಕರು ಬಂದಿದ್ದರು ಎಂದು ನುಡಿಯುತ್ತಾರೆ. ಅಕ್ಕಿಯನ್ನು ಗೋದಾಮಿಗೆ ಹಾಕಿದೇವು ಎಂದಾಗ ಎಷ್ಟು ಗಂಟೆಯಾಗಿತ್ತು ಎಂದರೆ ಸಾಕ್ಷಿಯು ಬೆಳಿಗ್ಗೆ 11 ಗಂಟೆಯಾಗಿತ್ತು ಎಂದು ನುಡಿಯುತ್ತಾರೆ.  ಆ ದಿನ ಕಚೇರಿಗೆ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಅದೆಲ್ಲ ಮುಗಿದು ಒಂದು ಗಂಟೆಯಾಗಿತ್ತು ಸಂಜೆ  4.00 ಗಂಟೆಗೆ ಹೋಗಿರುತ್ತೇನೆ ಎಂದು

ನುಡಿಯುತ್ತಾರೆ.  ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ  ಕಚೇರಿಗೆ ರಜೆಯನ್ನು ಏನಾದರೂ ಹಾಕಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.  ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವಕರೆಗೆ ನೀವು ಏನು ಕೆಲಸ ಮಾಡಿರುತ್ತೀರಾ ಎಂದು ಮುಮೆಂಟ್ ರಜಿಷ್ಟರ್ ನಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಮಾರನೇ ದಿನ ಮಾಡಿರುತ್ತೇವೆ ಎಂದು ನುಡಿಯುತ್ತಾರೆ.  ಆ ದಿನ ಎಲ್ಲ ಪ್ರಕ್ರಿಯೇ ಮುಗಿಯುತನಕ ಚಾಸಾ-4 ರವರುನಿಮ್ಮ  ಜೊತೆಗೆ ಇದ್ದರಾ ಎಂದರೆ ಇದ್ದರು ಎಂದು ನುಡಿಯುತ್ತಾರೆ. ಮಾರನೇ ದಿನ ಎಷ್ಟೊತ್ತಿಗೆ ಠಾಣೆಗೆ ಹೋಗಿರುತ್ತೀರಿ ಎಂದರೆ ಬೆಳಿಗ್ಗೆ 11 ಗಂಟೆಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ.  ದೂರನ್ನು ಎಲ್ಲಿ ಟೈಪ್ ಮಾಡಿಸಿರುತ್ತೀರಿ ಎಂದರೆ ಪೊಲೀಸ್ ಠಾಣೆಯಲ್ಲಿ ಟೈಪ್ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ.  ಯಾವುದೇ ಒಂದು  ತುರ್ತು ಸಂದರ್ಭ ಇದ್ದಾಗ  ಹಾಗೂ ಯಾವುದೇ ಒಂದು ಅಪರಾಧ ಆಗಿದೆ ಎಂದು ಕಂಡು ಬಂದಾಗ 112 ಮತ್ತು ಪೊಲೀಸರಿಗೆ ಕರೆ ಮಾಡುವ ಸಾಮಾನ್ಯ ಜ್ಞಾನ ನನಗೆ  ಇರುತ್ತದೆ ಎಂದರೆ ಸರಿ.  ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ವಾಹನವು ಕಂಡು ಬಂತು ಎಂದ ತಕ್ಷಣ ಪೊಲೀಸರಿಗೆ ಕರೆ ಮಾಡಲು  ಏನಾದರೂ ತೊಂದರೆ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.  4 ಗಂಟೆಗೆ ಕಚೇರಿಗೆ ಹೋದಾಗ ಫಿರ್ಯಾದಿಯನ್ನು ಕೊಡಲು ಏನಾದರೂ  ತೊಂದರೆ ಇತ್ತಾ ಎಂದರೆ ಸಾಕ್ಷಿಯು ಚಾಸಾ-4 ರವರಿಗೆ ಅಪಘಾತವಾಗಿದ್ದ ಕಾರಣ ಆಸ್ಪತ್ರೆಗೆ ಹೋಗಿದ್ದರಿಂದ ಫಿರ್ಯಾದಿಯನ್ನು ಕೊಡಲು ವಿಳಂಬವಾಗಿರುತ್ತದೆ ಎಂದು ನುಡಿಯುತ್ತಾರೆ. ಎಲ್ಲಿ ಹಾಗೂ ಎಷ್ಟು ಗಂಟೆಗೆ  ಅಪಘಾತವಾಗಿರುತ್ತದೆ  ಎಂದರೆ ಸಾಕ್ಷಿಯು

ಮಧ್ಯಾಹ್ನ 2.30 ಗಂಟೆಗೆ ಮಹಾಮಾಯಿ ದೇವಸ್ಥಾನದ ಎದುರಿಗೆ ಅಪಘಾತವಾಗಿರುತ್ತದೆ ಎಂದು ನುಡಿಯುತ್ತಾರೆ. ಅವರನ್ನು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅವರುನ್ನು ಏನಾದರೂ ಆಸ್ಪತ್ರೆಯಲ್ಲಿ ದಾಖಲಿಸಿರುತ್ತೀರಾ ಎಂದರೆ ಸಾಕ್ಷಿಯು ಒಂದು ಗಂಟೆ ಇದ್ದು, ನಂತರ ಮಂಗಳೂರಿಗೆ ಕಳುಹಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಅವರ ಜೊತೆಗೆ ಮಂಗಳೂರಿಗೆ ಹೋಗಿರುವುದಿಲ್ಲ. ಠಾಣೆಯಲ್ಲಿ ಎಷ್ಟು ಗಂಟೆಯವರೆಗೆ ಇದ್ದೀರಿ ಎಂದರೆ ಸಾಕ್ಷಿಯು 2 ಗಂಟೆಯವರೆಗೆ ಇದ್ದೇನು ಎಂದು ನುಡಿಯುತ್ತಾರೆ. ಠಾಣೆಯಲ್ಲಿಯೂ ಸಹ 11 ರಿಂದ 2 ಗಂಟೆಯವರೆಗೆ ಸಾಕಷ್ಟು ಜನರು ಓಡಾಡುತ್ತಿರುತ್ತಾರೆ ಎಂದರೆ ಸರಿ. ಆ ದಿನ ನೀವು ಹೋಗಿರುತ್ತೀರಿ ಎಂದು ಹೇಳಿದಾಗ ಎಷ್ಟು ಜನ ಇದ್ದರು ಎಂದು ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ರಾಶಿ ಜನರು ಓಡಾಡುತ್ತದ್ದರು ಎಂದು ನುಡಿಯುತ್ತಾರೆ. ನಿಪಿ–3 ಜಪ್ತಿ ಪಂಚನಾಮೆಯನ್ನು ಎಲ್ಲಿ ಟೈಪ್ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಪೊಲೀಸ್ ಠಾಣೆಯ 1 ನೇ ಮಹಡಿಯಲ್ಲಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ಅಲ್ಲಿಯೇ ಪ್ರಿಂಟ್ ಹಾಕಿ ಅಲ್ಲಿಯೇ ಸಹಿಯನ್ನು ತೆಗೆದುಕೊಂಡಿರುತ್ತಾರೆ.

6. ಮುದ್ದೆ ಮಾಲನ್ನು ಎಲ್ಲಿಂದ ತೆಗೆದಿರುತ್ತೀರಿ ಎಂದರೆ ಸಾಕ್ಷಿಯು ನಾವು ಜಪ್ತಿ ಮಾಡಿಕೊಂಡ ಬಂದ ಚೀಲಗಳ ಪೈಕಿ ಒಂದು ಚೀಲದಿಂದ ಅಂದಾಜು 5 ಕೆ.ಜಿ ಅಕ್ಕಿಯನ್ನು ತೆಗೆದಿರುತ್ತೇವೆ ಎಂದು ನುಡಿಯುತ್ತಾರೆ. 5 ಕೆ.ಜಿ ಅಕ್ಕಿ ಅಷ್ಟೇ ಇರುತ್ತದೆ ಎಂದು ಹೇಳಲು

ಆಗುವುದಿಲ್ಲ ಎಂದರೆ ಸರಿ. ಮುದ್ದೆ ಮಾಲನ್ನು ಯಾರು ತೆಗೆದಿರುತ್ತಾರೆ ಎಂದರೆ ಪೊಲೀಸರು ಎಂದು ನುಡಿಯುತ್ತಾರೆ. ಅದಕ್ಕೆ ಬಳ್ಳಿ ಕಟ್ಟಿರುತ್ತಾರಾ ಅಥವಾ ಹೊಲೆದಿರುತ್ತಾರಾ ಎಂದರೆ ಸಾಕ್ಷಿಯು ಬಳ್ಳಿ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅದನ್ನು ಪೊಲೀಸ್ ಠಾಣೆಯಲ್ಲಿಯೇ ಕಟ್ಟಿರುತ್ತಾರೆ. ಅಕ್ಕಿ ಚೀಲಗಳನ್ನು ಹೊಲೆದಿದ್ದರಾ ಅಥವಾ ಬಳ್ಳಿ ಕಟ್ಟಿದ್ದರಾ ಎಂದರೆ ಸಾಕ್ಷಿಯು ಬಳ್ಳಿಯನ್ನು ಕಟ್ಟಿದ್ದರು ಎಂದು ನುಡಿಯುತ್ತಾರೆ. ನೀವು ಜಪ್ತಿಮಾಡಿಕೊಂಡಿದ್ದೇವೆ ಎಂದು ಹೇಳುವ ಅಕ್ಕಿ ಚೀಲಗಳು ಏನಾಗಿರುತ್ತವೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಪೊಲೀಸ್ ಠಾಣೆಯಲ್ಲಿಯೇ ಬಿಟ್ಟು ಬಂದಿರುತ್ತೇವೆ ಎಂದು ನುಡಿಯುತ್ತಾರೆ.

7. ಅಕ್ಕಿ ಚೀಲದಲ್ಲಿ ಎಷ್ಟು ಎಷ್ಟು ಅಕ್ಕಿ ಇರುತ್ತವೆ ಎಂದು ನೀವೇನಾದರು ದಾಖಲೆ ಮಾಡಿಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮಗೇನಾದರೂ ಇಷ್ಟು ಕೆ.ಜಿ ತೂಕ ಇರುತ್ತವೆ ಎಂದು ಮಾಹಿತಿ ಕೊಟ್ಟಿರುತ್ತಾರಾ ಎಂದರೆ ಸಾಕ್ಷಿಯು ಕೊಟ್ಟಿರುವುದಿಲ್ಲ, ನಮ್ಮ ಮುಂದೆ ತೂಕ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಿಮ್ಮ ಹತ್ತಿರ ಸ್ಮಾರ್ಟ ಪೋನ್ ಇತ್ತಾ ಎಂದರೆ ಇತ್ತು ಎಂದು ನುಡಿಯುತ್ತಾರೆ. ನೀವು ಗಾಡಿಯನ್ನು ನೋಡಿದ ತಕ್ಷಣ ಗಾಡಿ ಹಾಗೂ ಅಕ್ಕಿಯ ಪೊಟೋನ್ನು ತೆಗೆದುಕೊಳ್ಳು ಏನಾದರೂ ತೊಂದರೆ ಇತ್ತಾ ಎಂದರೆ ತೆಗೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಅದನ್ನು ಫಿರ್ಯಾದಿಯ ಜೊತೆಗೆ ಪೊಲೀಸರಿಗೆ ಕೊಟ್ಟಿರುತ್ತೀರಾ ಎಂದರೆ ಇಲ್ಲ ಎಂದು

ನುಡಿಯುತ್ತಾರೆ. ನಿಮ್ಮ ಕಡೆ ಫೋಟೋಗಳು ಇರುತ್ತವೆ ಎಂದು ಪೊಲೀಸರಿಗೆ ಹೇಳಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆಗೇ ತಹಶೀಲ್ದಾರ ಕಚೇರಿಗೆ ತಾಗಿಕೊಂಡೇ ಇರುತ್ತದೆ ಎಂದರೆ ಸರಿ. ನನಗೆ ಯಾವುದೇ ಮಾಹಿತಿ ಬಂದಿದ್ದಾಗಲಿ , ಕೆಳಗಿನ ಮಂಜಗುಣಿಗೆ ಹೋಗಿದ್ದಾಗಲಿ, ಯಾವುದೇ ಟಾಟಾ ಏಸ್ ವಾಹನವನ್ನು ನೋಡಿದ್ದಾಗಲಿ, ಅಕ್ಕಿಯನ್ನು ಜಪ್ತಿ ಮಾಡಿ, ಪಂಚನಾಮೆಯನ್ನು ಬರೆದಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಹಾಗೂ ಘಟನಾ ಸ್ಥಳದಿಂದ ಆರೋಪಿಯು ಓಡಿ ಹೋಗಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಹಾಗೆ ವಶಪಡಿಸಿಕೊಂಡಿದ್ದೇವೆ ಎನ್ನುವ ಅಕ್ಕಿಯನ್ನು ಗೋದಾಮೀನಲ್ಲಿ ಇಟ್ಟಿದ್ದಾಗಲಿ ಅಥವಾ ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಪೊಲೀಸ್ ಠಾಣೆಗೆ ಹಾಗೂ ಘಟನಾ ಸ್ಥಳದಲ್ಲಿ ನನ್ನನು ಕರೆದುಕೊಂಡು ಹೋಗಿ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಂಕಿ ಸಂಖ್ಯೆಗೋಸ್ಕರ ಈ ಒಂದು ಸುಳ್ಳು ಪ್ರಕರಣವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣವನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಆರೋಪಿತರ ಯಾವುದೇ ತಪ್ಪು ಇರುವುದಿಲ್ಲ ಎಂದು ಗೊತ್ತಿದ್ದರೂ ಸಹ ಅವರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಅಕ್ಕಿಯನ್ನು ಗೋಡೌನನಲ್ಲಿ ಇಟ್ಟರೆ ಪೆಮೆಂಟ್ ಮಾಡಬೇಕಾಗುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ಅಕ್ಕಿಯನ್ನು ಇಟ್ಟ ಬಗ್ಗೆ ಪೆಮೇಂಟನ್ನು ಏನಾದರೂ ಮಾಡಿರುತ್ತೀರಾ ಎಂದರೆ ಇಲ್ಲ ಎಂದು

ನುಡಿಯುತ್ತಾರೆ. ನೀವು ತೆಗೆದುಕೊಂಡು ಹೋದ ಖಾಸಗಿ ವಾಹನಕ್ಕೆ ಸರಕಾರಕ್ಕೆ ಏನಾದರೂ ಖರ್ಚನ್ನು ಹಾಕಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಾನು ಠಾಣೆಯಲ್ಲಿ ಆರೋಪಿತರನ್ನು ಗುರುತಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 1 ಮತ್ತು 3 ನೇ ಆರೋಪಿತರ ಪರ ವಕೀಲರಾದ ಶ್ರೀ ಜಿ.ವಿ.ಎನ್ ಇವರಿಂದಃ

8. ರಿಕ್ಷಾದಲ್ಲಿ ಇದ್ದ ಅಕ್ಕಿಯು ಯಾರಿಂದ ಹೇಗೆ ಬಂದಿರುತ್ತವೆ ಎಂದು ಕೇಳಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಊರಿನ ಜನರಿಂದ ಕೇಳಿ ತಿಳಿದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಆ ಊರಿನ ಜನರು ಯಾರು, ಅವರ ಹೆಸರು, ವಿಳಾಸ ಹೇಳಲು ಆಗುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಬಾಸ್ಗೋಡ ವ್ಯಾಪ್ತಿಯಲ್ಲಿ ನಿಮಗೆ ಯಾರಿಗೆ ಎಷ್ಟು ಅಕ್ಕಿಯನ್ನು ಕೊಡುತ್ತಾರೆ ಎಂಬ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಲ್ಲೆಲ್ಲಿ ಯಾವ ಯಾವ ರೇಷನ್ ಅಂಗಡಿಯಲ್ಲಿ ಎಷ್ಟು ಅಕ್ಕಿ ಮಾರಾಟ ಆಗಿರುತ್ತವೆ ಎಂದು ಕೇಳಿ ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ರೀತಿ ಪ್ರಕರಣ ನಡೆದರೆ ನಾವು ಮೊಟ್ಟ ಮೊದಲ ಬಾರಿಗೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಳ್ಳಬೇಕಾಗುತ್ತದೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ

ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಳ್ಳಲು ಏನಾದರೂ ತೊಂದರೆ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಇಂತಹ ಪ್ರಕರಣದಲ್ಲಿ ರೇಷನ್ ಅಕ್ಕಿಯನ್ನು ಕದ್ದು ಮಾರಾಟ ಮಾಡಿದರೆ ಅವರ ರೇಷನ್ ಕಾರ್ಡನ್ನು ರದ್ದುಪಡಿಸುವ ಕ್ರಮ ಇರುತ್ತದೆ ಎಂದರೆ ಸರಿ. ಆ ದಿನ ಬೇನಾಮೀ ಅಕ್ಕಿಯನ್ನು ಹಿಡಿದೇನು ಎಂದಾಗ ಯಾವ ಅಂಗಡಿಯಿಂದ ಎಷ್ಟು ಎಷ್ಟು ಅಕ್ಕಿ ಬಂದಿರುತ್ತದೆ ಎಂದು ಕೇಳಿ ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ರೀತಿ ಅಕ್ರಮವಾಗಿ ಅಕ್ಕಿಯು ಯಾವ ಅಂಗಡಿಯಿಂದ ಬರುತ್ತಿದೆ ಎಂದು ಮೇಲಾಧಿಕಾರಿಗಳಿಗೆ ತಿಳಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

9. ದಿಃ28-05-2021 ರಂದು ನೀವು ಎಲ್ಲಿ ಇದ್ದಾಗ ಬಾತ್ಮಿ ಬಂದಿರುತ್ತದೆ ಎಂದು ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ಮನೆಯಲ್ಲಿದ್ದಾಗ ಬಂದಿರುತ್ತದೆ ಎಂದು ನುಡಿಯುತ್ತಾರೆ. ಬೆಳಿಗ್ಗೆ 6 ಗಂಟೆಗೆ ಬಂದಿರುತ್ತದೆ. ಬಾತ್ಮಿ ಎಲ್ಲಿಂದ ಹಾಗೂ ಯಾರಿಂದ ಬಂದಿರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ನಾನಾಗಲಿ ಅಥವಾ ನನ್ನ ಮೇಲಾಧಿಕಾರಿಗಳಾಗಲಿ ಬಾತ್ಮಿ ಕೊಟ್ಟ ವ್ಯಕ್ತಿಯನ್ನು ಕಂಡುಹಿಡಿದು ಆತನ ಹೇಳಿಕೆಯನ್ನು ಪಡೆಯಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ನೀವು ತಹಶೀಲ್ದಾರ ಆಗಿದ್ದರಿಂದ ಎಸಿ, ಡಿಸಿ , ಪೊಲೀಸ್ ಠಾಣೆ ಇವರ ಸಂಪರ್ಕದಲ್ಲಿ ಇರುತ್ತೇವೆ ಎಂದರೆ ಸರಿ. ಬಾತ್ಮಿ ಬಂದ ತಕ್ಷಣ ಅಂಕೋಲಾ ಪೊಲೀಸ್ ಠಾಣೆಗೆ ಕರೆ ಮಾಡಿ ಅವರ ಸಹಕಾರ ಪಡೆದುಕೊಂಡು ಘಟನಾ ಸ್ಥಳಕ್ಕೆ ಹೋಗಲು ಏನಾದರೂ ತೊಂದರೆ ಇತ್ತಾ

ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಘಟನಾ ಸ್ಥಳಕ್ಕೆ ಹೋದ ತಕ್ಷಣ ಅಲ್ಲಿಯ ಮಾಹಿತಿಯನ್ನು ಪೊಲೀಸ್ ಠಾಣೆಗೆ ತಿಳಿಸಿ, ಅಲ್ಲಿಂದ ಸಿಬ್ಬಂದಿಯನ್ನು ಕರೆಸಲು ಏನಾದರೂ ತೊಂದರೆ ಇತ್ತಾ ಎಂದರೆ  ಇಲ್ಲ ಎಂದು ನುಡಿಯುತ್ತಾರೆ.  ನೀವು ವಶಪಡಿಸಿಕೊಂಡ ಅಕ್ಕಿಗೂ ಹಾಗೂ ಆರೋಪಿತರಿಗೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ನೀವಾಗಲಿ ಅಥವಾ ನಿಮ್ಮ ಮೇಲಾಧಿಕಾರಿಗಳಾಗಲಿ ಅಕ್ಕಿಯು ಎಲ್ಲಿಂದ ಬಂದಿರುತ್ತದೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ರೇಷನ್ ತೆಗೆದುಕೊಂಡವರಿಂದ  ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಾರೆ ಎಂದು ನುಡಿಯುತ್ತಾರೆ. ಯಾರಿಂದ ತೆಗೆದುಕೊಂಡಿರುತ್ತೇನೆ ಎಂದು ಆ ವ್ಯಕ್ತಿಯ ಹೆಸರು, ವಿಳಾಸ ಹೇಳಲು ಆಗುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.  ನಾನು ಕಂದಾಯ ನಿರೀಕ್ಷಕನಾಗಿ ಬೇನಾಮಿ ಸ್ವತ್ತನ್ನು ಉಪಯೋಗಿಸಿಕೊಂಡು ಒಂದು ಸುಳ್ಳು ದೂರನ್ನು ಸೃಷ್ಟಿ ಮಾಡಿ, ಮೇಲಾಧಿಕಾರಿಗೆ ನಾನು ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ಈ ರೀತಿ ಆರೋಪಿತರ ವಿರುದ್ಧ ಸುಳ್ಳು ದೂರನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.  ನಿಮ್ಮ ಮರುಹೇಳಿಕೆಯಲ್ಲಿ ಅಕ್ಕಿಯುನ್ನು ಎಲ್ಲಿಂದ ಹಾಗೂ ಯಾರಿಂದ ತೆಗೆದುಕೊಂಡು ಬಂದಿದ್ದರು ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ.  ದಿಃ28-05-2021 ರಂದು ಸುಮಾರು  ಬೆಳಿಗ್ಗೆ 6.30 ಗಂಟೆಗೆ ಬರೆದ ಪಂಚನಾಮೆಗೆ ಪಂಚರನ್ನು ಯಾರು ಕರೆದಕುಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ನಾನೇ ಕರೆದುಕೊಂಡು ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಕಂದಾಯ ನಿರೀಕ್ಷಕನು ಆಗಿದ್ದರಿಂದ ಸಾಮಾನ್ಯವಾಗಿ ಎಲ್ಲ

ಜನರಿಗೆ ಪರಿಚಯವಿರುತ್ತದೆ ಎಂದರೆ ಸರಿ. ಈ ಪರಿಚಯದ ಲಾಭವನ್ನು ಇಟ್ಟುಕೊಂಡು ನನಗೆ ಬೇಕಾದ ವ್ಯಕ್ತಿಗಳನ್ನು ಉಪಯೋಗಿಸಿಕೊಂಡು ಒಂದು ಸುಳ್ಳು ಪಂಚನಾಮೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪಂಚನಾಮೆ ಮಾಡುವ ಪೂರ್ವದಲ್ಲಿ ಸಂಬಂಧಪಟ್ಟ ಮೇಲಾಧಿಕಾರಿಗಳ ಜೊತೆಗೆ ಚರ್ಚೆ ಮಾಡಿರುತ್ತೀರಾ ಎಂದರೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಇದರ ಬಗ್ಗೆ ಪಂಚನಾಮೆಯಲ್ಲಿ ಉಲ್ಲೇಖವಿರುವುದಿಲ್ಲ ಎಂದರೆ ಸರಿ. ಪಂಚನಾಮೆಯನ್ನು ಮಾಡುವ ಪೂರ್ವದಲ್ಲಿ ಈ ರೀತಿ ಅಪರಾಧವಾಗಿದೆ ಎಂದು ಪೊಲೀಸರಿಗೆ ಏನಾದರೂ ಮಾಹಿತಿ ಕೊಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅ ರೀತಿ ಮಾಹಿತಿ ಕೊಟ್ಟು ಅವರ ಸಮ್ಮುಖದಲ್ಲಿ ಪಂಚನಾಮೆ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನೀವೆ ಸೃಷ್ಟಿ ಮಾಡಿಕೊಂಡ ಪ್ರಕರಣಕ್ಕೆ ನಮಗೆ ಬೇಕಾದ ವ್ಯಕ್ತಿಗಳನ್ನು ಪಂಚರನ್ನಾಗಿ ಮಾಡಿಕೊಂಡು, ಸುಳ್ಳು ಪಂಚನಾಮೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.